1	2	3
24.	ರಾಯಚೂರು	159483
25.	ಶಿವಮೊಗ್ಗ	137309
26.	ತುಮಕೂರು	213397
27.	ಉಡುಪಿ	69198
28.	ಉತ್ತರ ಕನ್ನಡ	131301
	ಒಟ್ಟು	**4270806**

ಆ) ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ಆದಾಯ ರೂ. 12,000/– ಅಥವಾ ಅದಕ್ಕಿಂತ ಕಡಿಮೆ ಮತ್ತು ನಗರ/ಪಟ್ಟಣ ಪ್ರದೇಶಗಳಲ್ಲಿ ವಾರ್ಷಿಕ ಆದಾಯ ರೂ. 17,000/– ಅಥವಾ ಅದಕ್ಕಿಂತ ಕಡಿಮೆ ಹೊಂದಿರುವ ಕುಟುಂಬಗಳನ್ನು ಅದರ ಫಲಾನುಭವಿಗಾಗಿ ಆಯ್ಕೆ ಮಾಡಲಾಗಿದೆ.

ಇ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಸಬ್ಸಿಡಿ ಅನುದಾನ ಬರುವುದಿಲ್ಲ. ಆದರೆ 31.29 ಲಕ್ಷ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯ ಕೊಡುತ್ತಿದ್ದಾರೆ.

ಈ) ಇಲ್ಲ

ಉ) ಇಲ್ಲ. ಆದರೆ ಕೆಲವು ಕುಟುಂಬಗಳು ಕೈಬಿಟ್ಟು ಹೋಗಿವೆ ಎಂದು ಸುದ್ದಿ ಸರ್ಕಾರಕ್ಕೆ ಬಂದಿದೆ. ಈ ನ್ಯೂನತೆ ಸರಿಪಡಿಸಲು ಕ್ರಮ ಜರುಗಿದೆ.

ಊ) ಇಲ್ಲ.

ಈಗಾಗಲೇ ಮನೆ ಮನೆ ಸಮೀಕ್ಷೆಯಲ್ಲಿ ಬಿಟ್ಟು ಹೋಗಿರುವ ಅರ್ಹ ಬಿ.ಪಿ.ಎಲ್ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಮತ್ತು ದಿ: 16.06.2003ರವರೆಗೆ ಕಾಲಾವಕಾಶವನ್ನು ನೀಡಿ ಅರ್ಜಿಗಳನ್ನು ಪಡೆಯಲಾಗಿದೆ.

ಋ) ಹೌದು.

ಬ್ರಹ್ಮಾವರ ಸಕ್ಕರೆ ಸಹಕಾರಿ ಕಾರ್ಖಾನೆ ಕುರಿತು

3189 (3683) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಯ ವಿವಿಧ ಬ್ಯಾಂಕ್, ಸಹಕಾರಿ ಬ್ಯಾಂಕ್ ಹಾಗೂ ಇತರೆ ಸಂಘ ಸಂಸ್ಥೆಗಳಿಂದ ಪಡೆದಿರುವ ಒಟ್ಟು ಸಾಲದ ಹಾಗೂ ಠೇವಣಿ ಹಣ ಎಷ್ಟು;

ಆ) ಯಾವ ಸಹಕಾರಿ ಸಂಘಕ್ಕೆ ಬ್ಯಾಂಕಿಗೆ ಎಷ್ಟೆಷ್ಟು ಹಣವನ್ನು ಬಾಕಿ ಉಳಿಸಿಕೊಂಡಿದೆ: ವಿವರ ನೀಡುವುದು;

ಇ) ಬಾಕಿಯಿರುವ ಸಾಲದ ಮತ್ತು ಠೇವಣಿಯ ಮರುಪಾವತಿಗಾಗಿ ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು?

ಶ್ರೀ ಎಚ್. ವಿಶ್ವನಾಥ (ಸಹಕಾರ ಸಚಿವರು)

ಅ) ಕಾರ್ಖಾನೆಯು ವಿವಿಧ ಬ್ಯಾಂಕ್, ಸಹಕಾರಿ ಬ್ಯಾಂಕ್, ಸಹಕಾರಿ ಬ್ಯಾಂಕ್ ಹಾಗು ಇತರೆ ಸಂಘ ಸಂಸ್ಥೆಗಳಿಂದ ಒಟ್ಟು ರೂ. 683.14 ಲಕ್ಷ ಸಾಲ ಮತ್ತು 460.94 ಲಕ್ಷಗಳನ್ನು ಠೇವನಿ ಪಡೆದಿರುತ್ತದೆ.

ಆ) ಕಾರ್ಖಾನೆಯು ಉಳಿಸಿಕೊಂಡಿರುವ ಸಾಲ ಮತ್ತು ಠೇವಣಿಯ ವಿವರ ಈ ಕೆಳಕಂಡಂತಿದೆ.

I ಸಾಲಗಳು

ಅ) ಅವಧಿ ಸಾಲ	(ರೂ. ಲಕ್ಷಗಳಲ್ಲಿ)
1. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ (ನಿ), ಬೆಂಗಳೂರು	94.15
ಆ) ಸಕ್ಕರೆ ಅಡವು ಸಾಲ	
1. ದ.ಕ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ನಿ). ಮಂಗಳೂರು.	261.40
2. ಕೋಟೆ ಸಿ.ಎ. ಬ್ಯಾಂಕ್, ಕೋಟೆ	162.67
3. ಕಿನ್ನಿಗೋಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್	82.42
4. ಬಜಪೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್	82.50
ಒಟ್ಟು	**683.14**

II ಠೇವಣಿಗಳು

	1. ಸಹಕಾರ ಸಂಘಗಳಿಂದ ನಿಖರ ಠೇವಣಿ	2. ವ್ಯಕ್ತಿ ಸದಸ್ಯರುಗಳಿಂದ ನಿಖರ ಠೇವಣಿ	ಒಟ್ಟು
	ರೂ. ಲಕ್ಷಗಳಲ್ಲಿ		
ಅಸಲು	457.80	4.14	461.94
ಬಡ್ಡಿ (30.6.03)	138.57	3.13	141.70
ಒಟ್ಟು	596.37	7.27	603.64

ರೂ. 603.64 ಲಕ್ಷಗಳು

ಇ) ಬಾಕಿ ಇರುವ ಸಾಲ ಮತ್ತು ಠೇವಣಿಯನ್ನು ನಿಗದಿತ ಅವಧಿಯೊಳಗೆ ಮರುಪಾವತಿ ಮಾಡಲು ಕಾರ್ಖಾನೆಯು ಕ್ರಮವಿಡಬೇಕಾಗಿರುತ್ತದೆ.

ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿನ ಪ್ರಶಸ್ತಿ

3190 (3684) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ, ನೀಡಲಾಗುತ್ತಿರುವ ಪ್ರಶಸ್ತಿಗಳ ವಿವರಗಳೇನು;